ಪರಿಶಿಷ್ಟ ವರ್ಗ

ಅ) ಅರಣ್ಯ ಭೂಮಿ 29-00 ಎಕರೆಗಳು

ಕೆರೆ ಅಂಗಳ 19-17 ಎಕರೆಗಳು

ಇ) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ

ಅರಣ್ಯ ಭೂಮಿ 22-00 ಎಕರೆಗಳು

ಕೆರೆ ಅಂಗಳ 2-00 ಎಕರೆಗಳು

ಈ) ಇಲ್ಲ, ಅರಣ್ಯ ಮತ್ತು ಕೆರೆ ಅಂಗಳ ಪ್ರದೇಶಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮಿಕರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಬಗರ್‌ಹುಕುಂ ಜಮೀನನ್ನು ಸಕ್ರಮಗೊಳಿಸಲು ನಿಗಧಿತ ವೇಳೆಯಲ್ಲಿ ಅರ್ಜಿ ಸಲ್ಲಿಸದೆ ಇರುವವರಿಗೆ ಕ್ರಮ.

654 - ಶ್ರೀ ಎಸ್. ಚಿಕ್ಕಮಾಧು, (ಹುಣಸೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು, ಕಾರಣಾಂತರಗಳಿಂದ ನಿಗಧಿತ ವೇಳೆಯಲ್ ಅರ್ಜಿ ಸಲ್ಲಿಸದೆ ಇರುವವರಿಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಆ) ಸರ್ಕಾರಿ ಗೋಮಾಳ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಕ್ರಮಗೊಳಿಸು ಸರ್ಕಾರವು ಕೈಗೊಂಡ ಕ್ರಮಗಳಾವುವು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ನಿಗಧಿಪಡಿಸಿದ ದಿನಾಂಕವಾದ 19-9-1991ರ ನಂತರ ಬಂದ ಅರ್ಜಿಗಳನ್ನು ಸಕ್ರಮಗೊಳಿಸುವ ಬಗ್ಗೆ ಪರಿಗಣಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವುಗಳನ್ನು ಸಂಬಂಧಿಸಿದ ತಹಶೀಲ್ದಾರರು ವಿಲೇ ಮಾಡಿರುತ್ತಾರೆ.

ಆ) ನಿಯಮಾವಳಿಯನ್ನು ಸೂಕ್ತ ತಿದ್ದುಪಡಿ ಮಾಡಿ ಗೋಮಾಳ ಜಮೀನಿನನ ಅಕ್ರಮ ಸಾಗುವಳಿಯನ್ನು ಸಕ್ರಮೀಕರಿಸಲು ಅವಕಾಶವನ್ನು ಕಲ್ಪಸಲಾಗಿದೆ.

ಮುಂಡರಗಿ ತಾಲ್ಲೂಕಿನಲ್ಲಿ ಚಂಡ ಮಾರುತದಿಂದಾದ ಹಾನಿಯ ಅಂದಾಜು.

633 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಚಂಡಮಾರುತದಿಂದ ಬಿದ್ದ ಮನೆಗಳೆಷ್ಟು? ಹಾನಿಗೊಳಗಾದ ಪ್ರದೇಶದಲ್ಲಿ ಆಸ್ತಿ ಪಾಸ್ತಿಗಳಿಗಾದ ನಷ್ಟದ ಅಂದಾಜೆಷ್ಟು? ಹಾನಿಗೊಳಗಾದವರಿಗೆ ಸರ್ಕಾರವು ನೀಡಿರುವ ಪರಿಹಾರ ಧನವೆಷ್ಟು?

ಆ) ಮುಂಡರಗಿ ತಾಲ್ಲೂಕಿನ ಕಿಂಗಟಾಲೂರು, ಗುಮ್ಮಗೋಳ, ಹಮ್ಮಿಗಿ, ದಂಗಾಪ್ರರ, ಕೊರ್ಲಹಳ್ಳಿ ಹಾಗೂ ಬದರಹಳ್ಳಿ ಗ್ರಾಮಗಳು ಪೂರ್ತಿ ನಾಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಆ ಗ್ರಾಮಗಳ ಪುನರ್ವಸತಿಗಳಿಗಾಗಿ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ರಾಜಶೇರಮೂರ್ತಿ (ಕಂದಾಯ ಸಚಿವರು) :

ಅ) ಪೂರ್ಣ ಹಾನಿಯಾಗಿರುವ ಮನೆಗಳ ಸಂಖ್ಯೆ 1425
ಭಾಗಶಃ ಹಾನಿಯಾಗಿರುವ ಮನೆಗಳ ಸಂಖ್ಯೆ 6651
ಒಟ್ಟು **8076**
ಹಾನಿಗೊಳಗಾದ ಆಸ್ತಿ-ಪಾಸ್ತಿಗಳ ಅಂದಾಜು
ನಷ್ಟ ರೂ. 168.38 ಲಕ್ಷ
ಸರ್ಕಾರದಿಂದ ನೀಡಿರುವ ಪರಿಹಾರದ
ಮೊತ್ತ ರೂ. 64.56 ಲಕ್ಷ

ಆ) ಕಿಂಗಟಾಲೂರು ಗ್ರಾಮ ಮತ್ತು ಪೂರ್ಣ ಹಾನಿಗೊಳಗಾಗಿದ್ದು ಇತರೇ ಐದು ಹಳ್ಳಿಗಳು ಭಾಗಶಃ ಹಾನಿಗೊಳಗಾಗಿವೆ.

ಇ) ಕಿಂಗಟಾಲೂರು, ದಂಗಾಪುರ ಮತ್ತು ಕೊರ್ಲಹಳ್ಳಿ ಗ್ರಾಮಗಳ ಪುನರ್ವಸತಿಗೆ ಸ್ವಾಧೀನಪಡಿಸಿಕೊಂಡಿರುವ ಭೂಮಿ ಲಭ್ಯವಿದೆ. ಬಿಡಂಹಳ್ಳಿ ಗ್ರಾಮದ ಪುನರ್ವಸತಿಗಾಗಿ ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಂಡಿದೆ. ಗುಮ್ಮಗೋಳ ಮತ್ತು ಹಮ್ಮಿಗಿ ಗ್ರಾಮಗಳ ಪುನರ್ವಸತಿ ಅವಶ್ಯವಿರುವುದಿಲ್ಲ.

ನೆರೆ ಪರಿಹಾರಗೆ ಬಿಡುಗಡೆಯಾದ ಹಣ.

103 - ಶ್ರೀ ಪಿ.ಜಿ.ಆರ್. ಸಿಂಧ್ಯ, (ಕನಕಪುರ ವಿಧಾನಸಭಾ ಕ್ಷೇತ್ರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992ರ ಆಕ್ಟೋಬರ್-ನವೆಂಬರ್ ತಿಂಗಳುಗಳಲ್ಲಿ ರಾಜ್ಯದಲ್ಲಿ ವಿಪರೀತ ಮಳೆಯ ಹಾನಿಯಿಂದಾಗಿರುವ ನಷ್ಟಕ್ಕೆ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗಿರುವ ಹಣವೆಷ್ಟು?

ಆ) ರಾಜ್ಯ ಸರ್ಕಾರದಿಂದ ಬಿಡುಗಡೆ ಆಗಿರುವ ಹಣವೆಷ್ಟು ಹಾಗೂ ಬಿಡುಗಡೆಯಾದ ಹಣವು ವೆಚ್ಚವಾಗಿದೆಯೇ (ಜಿಲ್ಲಾವಾರು ವಿವರಗಳನ್ನು ನೀಡುವುದು)?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಕೇಂದ್ರ ಸರ್ಕಾರವು ಈ ಕೆಳಕಂಡಂತೆ ನೆರವನ್ನು ಒದಗಿಸಿದೆ

(ಕೋಟಿ ರೂ.ಗಳಲ್ಲಿ)

(1) 1992-93ನೇ ಸಾಲಿನಲ್ಲಿ ಕೇಂದ್ರದಿಂದ ರಾಜ್ಯ ಪ್ರಕೃತಿ ವಿಕೋಪ ನಿಧಿಗೆ ವಂತಿಗೆ 20.25
(2) 1993-94ನೇ ಸಾಲಿಗೆ 1 ಮತ್ತು 2ನೇ ಕಂತಿನ ಮುಂಗಡ ವಂತಿಗೆ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ 10.12
ಒಟ್ಟು **30.37**

ಆ) ರಾಜ್ಯ ಸರ್ಕಾರವು 1992-93ನೇ ಸಾಲಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ರೂ. 6.75 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.

ಸರ್ಕಾರವು ನೆರೆ ಪರಿಹಾರಕ್ಕಾಗಿ ಪ್ರವಾಹ ಪೀಡಿತ ಜಿಲ್ಲೆಗಳಿಗೆ ದಿನಾಂಕ 17.11.1992ರಿಂದ 30.12.1992ರವರೆಗೆ ಈ ಕೆಳಕಂಡಂತೆ ಹಣವನ್ನು ಬಿಡುಗಡೆ ಮಾಡಿದೆ (ಜಿಲ್ಲಾವಾರು)